# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,**
**ಬೃ.ಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು**

ಸಂಖ್ಯೆ:ಸ.ಇಂ/ವಾ–144/ವಾರ್ಡ್ ಸಭೆ/2020–21 ದಿನಾಂಕ:07/11/2020

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ದಿನಾಂಕ:07/11/2020 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್–144ರ ವಾರ್ಡ್ ಕಛೇರಿಯಲ್ಲಿ (ದಕ್ಷಿಣ ವಲಯ) ವಾರ್ಡ್ 144–ಸಿದ್ದಾಪುರ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ಆರ್. ಕೊಟ್ರೇಶ್‌ನಾಯಕ್ | ಸಹಾಯಕ ಅಭಿಯಂತರರು ವಾರ್ಡ್–144– ಸಿದ್ದಾಪುರ | ಹಾಜರಿದ್ದರು |
| 2 | ಶ್ರೀ. ಜಿ. ಮೂರ್ತಿ | ಸಹಾಯಕ ಅಭಿಯಂತರರು ವಿದ್ಯುತ್ (ದಕ್ಷಿಣ) | ಹಾಜರಿದ್ದರು |
| 3 | ಶ್ರೀ. ಟಿ. ರಾಮ್‌ದಾಸ್ | ಸಹಾಯಕ ಕಂದಾಯ ಅಧಿಕಾರಿ ಹೊಂಬೇಗೌಡನಗರ ಉಪವಿಭಾಗ | ಹಾಜರಿದ್ದರು |
| 4 | ಶ್ರೀ. ರಾಘವೇಂದ್ರ ಇಜೇರಿ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು |
| 5 | ಶ್ರೀಮತಿ. ಸುರೇಖ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–144 | ಹಾಜರಿದ್ದರು |
| 6 | ಶ್ರೀ. ಅರುಣ್‌ಕುಮಾರ್ | DWCC –Ward-144 | ಹಾಜರಿದ್ದರು |
| 7 | ಶ್ರೀ. ಸಚಿನ್ | ಕೆಲಸ ಪರಿವೀಕ್ಷಕರು BWSSB | ಹಾಜರಿದ್ದರು |
| 8 | ಶ್ರೀ. ಸಲ್ಮಾನ್ ಖಾನ್ | ಸಹಾಯಕ ಅಭಿಯಂತರರು BWSSB(SPML) | ಹಾಜರಿದ್ದರು |
| 9 | ಶ್ರೀ. ಬಾಲ ಮುರುಗನ್ | ಗುತ್ತಿಗೆದಾರರು BWSSB(SPML) | ಹಾಜರಿದ್ದರು |
| **ಕ್ರಮ ಸಂಖ್ಯೆ** | **ಸದಸ್ಯರ ಹೆಸರು** | **ಪದನಾಮ** | **ಹಾಜರಾತಿ** |
| 1 | ಶ್ರೀ. ನಜೀಮಾ (ಅಫ್ಜಲ್) | ಸದಸ್ಯರು | ಹಾಜರಿದ್ದರು |
| 2 | ಶ್ರೀ. ಸಯ್ಯದ್ ನಿಜಾಮುದ್ದೀನ್ | ಸದಸ್ಯರು | ಹಾಜರಿದ್ದರು |
| 3 | ಶ್ರೀ. ಅಲ್ತಫ್ ಪಾಷ | ಸದಸ್ಯರು | ಹಾಜರಿದ್ದರು |
| 4 | ಶ್ರೀಮತಿ. ಮರಗತವಳ್ಳಿ | ಸದಸ್ಯರು | ಹಾಜರಿದ್ದರು |

ಮು.ಪಿ.ನೋ.



Scanned with CamScanner

| ಕ್ರಮ ಸಂಖ್ಯೆ | ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಮಂಜು | ಸ್ಥಳೀಯರು | ಹಾಜರಿದ್ದರು |
| 2 | ಶ್ರೀ. ಸುರೇಶ್ ಹೆಚ್.ಕೆ. | ಸ್ಥಳೀಯರು | ಹಾಜರಿದ್ದರು |
| 3 | ಶ್ರೀ. ಅಶೋಕ್ ಜಿ. | ಸ್ಥಳೀಯರು | ಹಾಜರಿದ್ದರು |
| 4 | ಶ್ರೀ. ಚೇತನ್ ಆರ್. | ಸ್ಥಳೀಯರು | ಹಾಜರಿದ್ದರು |
| 5 | ಶ್ರೀ. ಇಮ್ತಿಯಾಜ್ | ಸ್ಥಳೀಯರು | ಹಾಜರಿದ್ದರು |
| 6 | ಶ್ರೀ. ಅಸ್ಲಂ | ಸ್ಥಳೀಯರು | ಹಾಜರಿದ್ದರು |
| 7 | ಶ್ರೀ. ಮನ್ನು | ಸ್ಥಳೀಯರು | ಹಾಜರಿದ್ದರು |
| 8 | ಶ್ರೀ. ಅಯಿಲು | ಸ್ಥಳೀಯರು | ಹಾಜರಿದ್ದರು |
| 9 | ಶ್ರೀ. ಕನ್ನಸ್ವಾಮಿ | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧಿಕಾರಿಗಳು/ಹಾಜರಿದ್ದ ಸದಸ್ಯರ ಪರಸ್ಪರ ಪರಿಚಯದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು. ಈ ಸಭೆಯಲ್ಲಿ ಸ್ವಾಗತ ಕೋರುತ್ತಾ, ಮುಂದಿನ ಮಾಸಿಕ ಎರಡನೇ ಸಭೆಯಲ್ಲಿ ಹಾಲಿ ಇರುವ ಸದಸ್ಯರೊಂದಿಗೆ ವಾರ್ಡಿನ ಶುಚಿಮಿತ್ರ ಹಾಗೂ ಸಂಘ ಸಂಸ್ಥೆಗಳ ಪದಾದಿಕಾರಿಗಳು ಭಾಗವಹಿಸಲು ಸೂಚಿಸಿದರು.

1. <u>**ವಾರ್ಡಿನ ಘನತ್ಯಾಜ್ಯದ ಬಗ್ಗೆ:-**</u> ಘನತ್ಯಾಜ್ಯದ ಬಗ್ಗೆ ಮಾತನಾಡಿ ಹೊಸ ಟೆಂಡರ್ ಅನ್ನು ಕರೆಯಲಾಗುವುದು ಅದರನ್ವಯ ವಾರ್ಡ್ ಮಟ್ಟದಲ್ಲಿ GPS ಅಳವಡಿಸಿಕೊಂಡು ವಾರ್ಡಿನ ಪ್ರತಿ ರಸ್ತೆಗೆ ದಿನಾಲೂ ಹಸಿ ಮತ್ತು ಸ್ಯಾನಿಟರಿ ವೇಸ್ಟ್ ಅನ್ನು ಸಂಗ್ರಹಿಸುವುದು ಹಾಗೂ ವಾರದ ಎರಡು ದಿನಗಳಲ್ಲಿ ಒಣ ಕಸವನ್ನು ಸಂಗ್ರಹಣೆ ಮಾಡಲು ಉದ್ದೇಶಿಸಲಾಗಿದೆ ಎಂದು ಅಧ್ಯಕ್ಷರು ಹಿಂದಿನ ಸಭೆಯಲ್ಲಿ ಸೂಚಿಸಿದ್ದರ ಪ್ರಕಾರ ವಾರ್ಡಿನ ಪ್ರದೇಶದಲ್ಲಿ ಘನತ್ಯಾಜ್ಯ ಇಲಾಖೆಯವರು ಕಸ ಸಂಗ್ರಹಣೆ ಪ್ರಾರಂಭಿಸಿರುತ್ತಾರೆ. ಎಂದು ಶ್ರೀ. ರಾಘವೇಂದ್ರ ಇಜೇರಿ (ಹಿ.ಆ.ಪ) ರವರು ಸಭೆಗೆ ತಿಳಿಸಿದರು. ಹಾಗೂ ವಾರ್ಡ್‌ನಲ್ಲಿ ದಿನನಿತ್ಯ Dry Waste Collection ಸಮರ್ಪಕವಾಗಿ ಮಾಡಡಲಾಗುತ್ತಿದೆ ಎಂದು DWCC ಯ ಶ್ರೀ. ಅರುಣ್‌ಕುಮಾರ್ ರವರು ತಿಳಿಸಿದರು.

ವಾರ್ಡಿನ ಸದಸ್ಯರಾದ ಶ್ರೀ. ಸಯ್ಯದ್ ನಿಜಾಮುದ್ದೀನ್ ರವರು ದಿನಾಲೂ ಸಾರ್ವಜನಿಕರು ಹಾಕುವ ಕಸದ ಸ್ಥಳವಾದ ನಿಮ್ಹಾನ್ಸ್ ಟ್ಯಾಂಕಿನ ಬಳಿ ಇರುವ 1ನೇ ಅಡ್ಡರಸ್ತೆಯ ಸೋಮೇಶ್ವರ ಮುಖ್ಯರಸ್ತೆಯಲ್ಲಿ ಶಾಶ್ವತವಾಗಿ ಕಸ ಹಾಕದಂತೆ ಕ್ರಮ ವಹಿಸಲು ಕೋರಿದ ಹಿನ್ನೆಲೆಯಲ್ಲಿ ಅದರಂತೆ ದಿನಾಂಕ:10-11-2020 ರಂದು (ಮಂಗಳವಾರ) ಹಾಗೂ ದಿನಾಂಕ:12-11-2020 (ಗುರುವಾರ) ರಂದು ಸ್ಥಳೀಯರು, ವಾರ್ಡ್ ಸಮಿತಿಯ ಸದಸ್ಯರು, ಸಹಾಯಕ ಅಭಿಯಂತರರು ಮತ್ತು ಘನತ್ಯಾಜ್ಯ ವಿಭಾಗದವರೊಂದಿಗೆ ಜೊತೆಗೂಡಿ ಶಾಶ್ವತವಾಗಿ ಕಸ ಹಾಕದಂತೆ ಕ್ರಮ ವಹಿಸಲು ಚರ್ಚಿಸಿರುತ್ತಾರೆ.

ಮು.ತಿ.ನೋ..



Scanned with CamScanner

ಮುಂದುವರೆದಂತೆ ನರ್ಸರಿಯಲ್ಲಿ ಗಿಡ ವ್ಯಾಪಾರ ಮಾಡುವವರು ಗಿಡಗಳು ಮಣ್ಣು ಮತ್ತು ಎಲೆಯ ಸಮೇತ ಕಸವನ್ನು ಪ್ರತಿ ದಿನ ಮುರಳಿ ಸ್ಲಂ ಸರ್ಕಾರಿ ಶಾಲೆಯ ಎದುರಿಗೆ ಹಾಕುತ್ತಿದ್ದು, ಇವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಶ್ರೀ. ಅಶೋಕ್ ಜಿ. ಸ್ಥಳೀಯರು ಕೋರಿರುತ್ತಾರೆ. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಹಾಗೂ ಘನತ್ಯಾಜ್ಯ ವಿಭಾಗ ದವರು ಪ್ರತಿಕ್ರಿಯಿಸಿ ಈ ಬಗ್ಗೆ ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿದರು. ಹಾಗೂ ವಾರ್ಡ್ ಪ್ರದೇಶದಲ್ಲಿ ಅಲ್ಲಲ್ಲಿ ಕಸ ಹಾಗೂ ಮಣ್ಣನ್ನು ಹಾಕುವುದನ್ನು ತಡೆಯಲು ಮತ್ತು ಕೋವಿಡ್-19ರ ನಿಯಮ ಉಲ್ಲಂಘನೆ ಆಗದಂತೆ ಕ್ರಮ ವಹಿಸಲು ಮಾರ್ಷಲ್‌ಗಳ ಅವಶ್ಯಕತೆ ಇರುವುದಾಗಿ ತಿಳಿಸಿದರು.

ವಾರ್ಡಿನ ಸದಸ್ಯರಾದ ಶ್ರೀಮತಿ. ನಜೀಮಾ ಮತ್ತು ಶ್ರೀಮತಿ. ಮರಗತವಳ್ಳಿ ರವರು ಪೌರಕಾರ್ಮಿಕರಿಗೆ ತಳ್ಳುವ ಗಾಡಿ ಹಾಗೂ ಆರೋಗ್ಯದ ಹಿತದೃಷ್ಟಿಯಿಂದ ಪೌರಕಾರ್ಮಿಕರುಗಳಿಗೆ ಮಾಸ್ಕ್ ಹಾಗೂ ಹ್ಯಾಂಡ್ ಗ್ಲೌಸ್‌ಗಳನ್ನು ನೀಡಲು ದಿ:03-10-2020ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ ಘನತ್ಯಾಜ್ಯ ನಿರ್ವಹಣೆಯ ಹಿರಿಯ ಆರೋಗ್ಯ ಪರಿವೀಕ್ಷಕರು ಅಂದಾಜನ್ನು ತಯಾರಿಸಿ ಸಲ್ಲಿಸಲಾಗಿದೆ ಎಂದು ಸಭೆಯಲ್ಲಿ ಮತ್ತೊಮ್ಮೆ ಎಲ್ಲಾ ಸದಸ್ಯರಿಗೂ ತಿಳಿಸಿದರು.

2. **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-** ವಾರ್ಡಿನ ಸಾರ್ವಜನಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳೊಂದಿಗೆ ಸಭೆಗೆ ಹಾಜರಾಗಿರುವುದಿಲ್ಲ.

ವೈದ್ಯಾಧಿಕಾರಿಯವರು ಸಭೆಯನ್ನ ಉದ್ದೇಶಿಸಿ ಮಾತನಾಡಿ ಹಾಲಿ ವಾರ್ಡಿನಲ್ಲಿ 12 ಕೋವಿಡ್ ಪಾಸಿಟೀವ್ ರೋಗಿಗಳಿರುವುದು ಮತ್ತು ಹೋಮ್ ಐಸೋಲೇಷನ್‌ನಲ್ಲಿ 8 ನಾಗರೀಕರು ಇರುವ ಮಾಹಿತಿಯನ್ನು ಒದಗಿಸಿದರು. ಹಾಗೂ ವಾರ್ಡಿನಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನ ಜಾಗೃತಿ ಮೂಡಿಸಲು ಘನತ್ಯಾಜ್ಯದ ಗುತ್ತಿಗೆದಾರರಿಗೆ ಮತ್ತೊಮ್ಮೆ ಸೂಚಿಸಿದರು.

ಮಾಸ್ಕ್ ಧರಿಸದೇ ಸಾರ್ವಜನಿಕವಾಗಿ ಓಡಾಡುವವರಿಗೆ ಕಡ್ಡಾಯವಾಗಿ ನಿಯಮಾವಳಿಗಳನ್ವಯ ದಂಡ ವಿಧಿಸುವುದು & ಮಾಸ್ಕ್ ಧರಿಸುವಂತೆ ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳುವಂತೆ ಮನವೊಲಿಸುವ ಕೆಲಸವನ್ನು ನಿರ್ವಹಿಸುವಂತೆ ವೈದ್ಯರು ಮತ್ತೊಮ್ಮೆ ಸಭೆಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ವೈದ್ಯಾಧಿಕಾರಿಯವರೊಂದಿಗೆ ಸ್ಥಳೀಯರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸಾರ್ವಜನಿಕರಿಂದ ರಕ್ತ ದಾನ ಶಿಬಿರ ಹಮ್ಮಿಕೊಂಡಿರುವುದು ಕಂಡು ಬಂದಿದ್ದು, ಅಂತಹ ಪ್ರದೇಶದಲ್ಲಿ ಕೋವಿಡ್-19 ಪರೀಕ್ಷೆಯ ಶಿಬಿರವನ್ನು ಪ್ರಾರಂಭಿಸಿ ರಕ್ತದಾನಕ್ಕೆ ಮೊದಲು ಕೋವಿಡ್ ಪರೀಕ್ಷೆ ನಡೆಸುವುದು ಅತ್ಯವಶ್ಯಕ ಎಂದು ಸಭೆಗೆ ತಿಳಿಸಿದರು.

ಮು.ತಿ.ನೋ.-



Scanned with CamScanner

3. **ವಾರ್ಡಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ:-** ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ವಾರ್ಡ್‌ನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳು ತೃಪ್ತಿಕರವಾಗಿದೆ ಎಂದು ತಿಳಿಸಿದರು. ಅದರಂತೆ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಸರಿಯಾದ ಸಮಯಕ್ಕೆ ಪೂರ್ಣಗೊಳಿಸಲು ಅಧ್ಯಕ್ಷರು ಮತ್ತೊಮ್ಮೆ ಸದರಿ ವಾರ್ಡಿನ ಅಭಿಯಂತರರಿಗೆ ಸೂಚಿಸಿದರು. ಹಾಗೂ ಮುಖ್ಯ ರಸ್ತೆಗಳಲ್ಲಿ ಸ್ಲಂ ಬೋರ್ಡಿನ ಗುತ್ತಿಗೆದಾರರು ಹಾಕಿರುವ ಜಲ್ಲಿ ಮತ್ತು ಎಂ. ಸ್ಯಾಂಡ್‌ಗಳಿಂದ ವಾಹನ ಓಡಾಡಲು ಮತ್ತು ಸಾರ್ವಜನಿಕರು ಓಡಾಡಲು ತುಂಬಾ ತೊಂದರೆಯಾಗಿದ್ದು, ಇಲ್ಲಿಯವರೆಗೆ ಸದರಿ ವಾಹನ ತೆರವುಗೊಳಿಸಲು ಸಂಚಾರ ಪೋಲೀಸ್ ವಿಭಾಗದವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಸ್ಥಳೀಯರು ಸಭೆಯಲ್ಲಿ ತಿಳಿಸಿದರು.

4. **ವಾರ್ಡಿನಲ್ಲಿ ಅನಧಿಕೃತ ರಸ್ತೆ ಕತ್ತರಿಸುವ ಬಗ್ಗೆ:-** ವಾರ್ಡ್‌ನಲ್ಲಿ ಅನಧಿಕೃತವಾಗಿ ರಸ್ತೆ ಕತ್ತಿರಿಸುವುದು ಕಂಡು ಬಂದಲ್ಲಿ ಸದರಿ ಸಂಸ್ಥೆ/ಇಲಾಖೆಗಳಿಗೆ ನಗರಾಭಿವೃದ್ಧಿ ಇಲಾಖೆಯ ಸೂಚನೆಗಳ ಮೇರೆಗೆ ಕ್ರಮ ವಹಿಸಲು ಮತ್ತೊಮ್ಮೆ ಅಧ್ಯಕ್ಷರು ಸೂಚಿಸಿದರು.

5. **ತೆರಿಗೆ ವಸೂಲಾತಿಗಳ ಬಗ್ಗೆ:-** ವಾರ್ಡ್‌ನಲ್ಲಿ ಒಟ್ಟು ಆಸ್ತಿಗಳಿಂದ ಎಷ್ಟು ತೆರಿಗೆ ವಸೂಲಾತಿಯಾಗಿದೆ ಎಂಬ ವಿವರವನ್ನು ನೀಡಲು ಅಧ್ಯಕ್ಷರು ರವರು ಹಿಂದಿನ ಸಭೆಯಲ್ಲಿ ಹಾಜರಾಗಿದ್ದ ಸಹಾಯಕ ಕಂದಾಯ ಅಧಿಕಾರಿಯವರಿಗೆ ಸೂಚಿಸಿದ್ದರು, ಅದರಂತೆ ಸದರಿ ವಾರ್ಡಿನಲ್ಲಿ ಹೆಚ್ಚು ಕೊಳಚೆ ಪ್ರದೇಶಗಳಿದ್ದು, ವಾರ್ಡ್‌ನಲ್ಲಿ ಕಡಿಮೆ ಮಟ್ಟದಲ್ಲಿ ತೆರಿಗೆ ವಸೂಲಾತಿಯಾಗುವುದೆಂದು ಮತ್ತೊಮ್ಮೆ ಮನವರಿಕೆ ಮಾಡಿದರು. ಹಾಗೂ ವಾರ್ಡಿನ ಸ್ಥಳೀಯರಾದ ಶ್ರೀ. ಜಿ. ಅಶೋಕ ರವರು ಸಿದ್ದಾಪುರ ವಾರ್ಡ್ ಮತ್ತೊಮ್ಮೆ ಸರ್ವೆ ಮಾಡಬೇಕೆಂದು ಸಭೆಯಲ್ಲಿ ಸಹಾಯಕ ಕಂದಾಯ ಅಧಿಕಾರಿಗೆ ತಿಳಿಸಿದರು. ಅದರಂತೆ ಸಹಾಯಕ ಕಂದಾಯ ಅಧಿಕಾರಿಯವರು ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

## 6. ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ.

1. **ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಸಂಬಂಧಿಸಿದಂತೆ:-** ಸ್ಯಾನಿಟರಿ ಚೇಂಬರ್‌ಗಳಿಂದ ಮೇಲೆತ್ತುವ ಹೂಳನ್ನು ಸೂಕ್ತ ರೀತಿಯಲ್ಲಿ ಸಕಾಲದಲ್ಲಿ ವಿಲೇವಾರಿ ಮಾಡುವಂತೆ ಹಾಗೂ ರಸ್ತೆಯಿಂದ ಎತ್ತರ ಅಥವಾ ತಗ್ಗಿನಲ್ಲಿರುವ ಸ್ಯಾನಿಟರಿ ಚೇಂಬರ್‌ಗಳಿದ್ದರೆ ಶೀಘ್ರವಾಗಿ ರಸ್ತೆ ಮಟ್ಟಕ್ಕೆ ಅಳವಡಿಸುವಂತೆ ಹಾಗೂ ಸಾರ್ವಜನಿಕರಿಗೆ ಶುದ್ಧವಾದ ಕುಡಿಯುವ ನೀರು ಸರಬರಾಜು ಮಾಡುವಂತೆ ಹಿಂದಿನ ಸಭೆಯಲ್ಲಿ ಅಧ್ಯಕ್ಷರು ಸೂಚಿಸಿದ್ದ ಮೇರೆಗೆ ಹಾಲಿ ಹಾಜರಿದ್ದ ಕೆಲಸ ಪರಿವೀಕ್ಷಕರು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಸಭೆಗೆ ತಿಳಿಸಿದರು.

ಮು.ಪು.ನೋ..



Scanned with CamScanner

ಅದರಂತೆ ಅಧ್ಯಕ್ಷರು BWSSB ಹಾಗೂ ಇದರ ಉಪ ಸಂಸ್ಥೆಯಾದ SPML ಇಲಾಖೆಯವರು ಈಗಾಗಲೇ ವಾರ್ಡ್ ಮಟ್ಟದಲ್ಲಿ ನೀರಿನ ಸೋರಿಕೆಯನ್ನು ಪರೀಕ್ಷಿಸಲು ಹಾಗೂ ಒಳಚರಂಡಿಯ ಕಾಮಗಾರಿಗಳಿಗಾಗಿ ಸುಮಾರು ರಸ್ತೆಗಳನ್ನು ಅಗೆದಿದ್ದು, ಇಲ್ಲಿಯವರೆಗೆ ಯಾವುದೇ ರಸ್ತೆಯಿಂದ ಮಣ್ಣನ್ನು ಸಾಗಿಸದೇ ಇಲ್ಲಿಯವರೆಗೂ ಯಥಾಸ್ಥಿತಿಗೆ ತಂದಿರುವುದಿಲ್ಲ ಎಂದು ವಾರ್ಡಿನ ಅಭಿಯಂತರರು ಹಿಂದಿನ ಸಭೆಯಲ್ಲಿ ಅಧ್ಯಕ್ಷರಿಗೆ ತಿಳಿಸಿದ್ದರು. ಹಾಲಿ ಸಭೆಯಲ್ಲಿ ಹಾಜರಿದ್ದ BWSSB ಉಪ ಸಂಸ್ಥೆಯಾದ SPML ಇಲಾಖೆಯ ಸಹಾಯಕ ಅಬಿಯಂತರರಾದ ಶ್ರೀ. ಸಲ್ಮಾನ್ ಖಾನ್ ರವರು ಸದರಿ ರಸ್ತೆಗಳನ್ನು ಕೂಡಲೇ ಯಥಾಸ್ಥಿತಿಗೆ ತರಲು ಕ್ರಮ ವಹಿಸುವುದಾಗಿ ತಿಳಿಸಿದರು.

2. **ವಿದ್ಯುತ್ ವಿಭಾಗ–** ವಾರ್ಡ್ ಪ್ರದೇಶದಲ್ಲಿ ಬಾಗಿರುವ ವಿದ್ಯುತ್ ಕಂಬಗಳು ಹಾಗೂ ಕೆಲವು ರಸ್ತೆಗಳಿಗೆ ಅಡ್ಡವಾಗಿರುವ ಕಂಬಗಳನ್ನು ಸರಿಡಿಸಲು ವಾರ್ಡ್‌ನ ಅಭಿಯಂತರರು ಹಿಂದಿನ ಸಭೆಯಲ್ಲಿ ಕೋರಿದ್ದರು ಆದರೆ. ಬೆಸ್ಕಾಂ ಇಲಾಖೆಯವರು ಗೈರು ಹಾಜರಾಗಿರುವುದರಿಂದ ಈ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಸಹಾಯಕ ಅಭಿಯಂತರರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| 7/11/2020 | ಸಹಿ/ |
| (ಆರ್. ಕೊಟ್ರೇಶ್‌ನಾಯಕ್) | (ನರಸರಾಮರಾವ್) |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್–144 ಸಿದ್ದಾಪುರ | ವಾರ್ಡ್–144 ಸಿದ್ದಾಪುರ |



Scanned with CamScanner